ಸಂಪುಟ : 40 ಸಂಚಿಕೆ:310 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 06 ಡಿಸೆಂಬರ್ 2017 ಬುಧವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್

ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
For Advertisements: prajapragathiadds@gmail.com
Web : prajapragathi.com

2 ಜಿ ಸ್ಪೆಕ್ಟ್ರಂ ಹಗರಣದ ಅಂತಿಮ ತೀರ್ಪು ಡಿ.21ಕ್ಕೆ ಪ್ರಕಟ: ದೆಹಲಿ ಹೈಕೋರ್ಟ್

ವಿವರ : ಪುಟ 5

ಚೆನ್ನೈನ ಆರ್.ಕೆ.ನಗರ ಉಪಚುನಾವಣೆ: ನಟ ವಿಶಾಲ್ ದೀಪಾಜಯಕುಮಾರ್ ನಾಮಪತ್ರ ತಿರಸ್ಕೃತ

ವಿವರ : ಪುಟ 5

3ನೇ ಟೆಸ್ಟ್ ಕ್ರಿಕೆಟ್ : ಲಂಕಾಗೆ ಆಘಾತ, ಪಂದ್ಯ ಗೆಲ್ಲಲು ಟೀಂ ಇಂಡಿಯಾಗೆ 7 ವಿಕೆಟ್‌ಗಳ ಗುರಿ

ವಿವರ : ಪುಟ 5

ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಚುನಾವಣೆಗೆ ರಾಹುಲ್‌ಗಾಂಧಿ ಏಕೈಕ ಅಭ್ಯರ್ಥಿ

ವಿವರ : ಪುಟ 5

Gold 916 ₹ 2750/–
Silver ₹40000/–
ಸೂರ ಜ್ಯೂಯಲರ್ಸ್
Ashoka Road, Tumkur
Ph: 0816 4022274

ಪ್ರಗತಿ ಪರಿಶೀಲನಾ ಸಭೆ ಬಳಿಕ ಸಂಸದರ ಪ್ರಕಟಣೆ:

‘ಸ್ಮಾರ್ಟ್‌ಸಿಟಿ’ ಕಾಮಗಾರಿ ಮಾಸಾಂತ್ಯಕ್ಕೆ ಚಾಲನೆ

ತುಮಕೂರು

ಬಹುನಿರೀಕ್ಷಿತ ‘ಸ್ಮಾರ್ಟ್‌ಸಿಟಿ’ ಯೋಜನೆಗೆ ತುಮಕೂರು ನಗರ ಆಯ್ಕೆ ಆಗಿದ್ದು, ನಗರದ ಸರ್ವತೋಮುಖ ಅಭಿವೃದ್ಧಿಗೆ ಅನೇಕ ರೂಪು ರೇಷೆಗಳನ್ನು ತುಮಕೂರು ಸ್ಮಾರ್ಟ್‌ಸಿಟಿ ಕಂಪನಿಯು ಸಿದ್ದಪಡಿಸಿದೆ. ಅವುಗಳಲ್ಲಿ ಮೊದಲ ಹಂತವಾಗಿ ಕೆಲವು ಭೌತಿಕ ಕಾಮಗಾರಿಗಳಿಗೆ ಇದೇ ಡಿಸೆಂಬರ್ ಅಂತ್ಯದೊಳಗೆ ಚಾಲನೆ ನೀಡಲಾಗುವುದು ಎಂದು ತುಮಕೂರು ಲೋಕಸಭಾ ಸದಸ್ಯ ಎಸ್.ಪಿ. ಮುದ್ದಹನುಮೇ ಗೌಡ ಪ್ರಕಟಿಸಿದರು.

ಅವರು ಮಂಗಳವಾರ ಬೆಳಗ್ಗೆ ತುಮಕೂರು ನಗರದ ಸೋಮೇಶ್ವರಪುರಂ ಮುಖ್ಯರಸ್ತೆಯಲ್ಲಿರುವ ತುಮಕೂರು ಸ್ಮಾರ್ಟ್‌ಸಿಟಿ ಕಂಪನಿ ಲಿಮಿಟೆಡ್ ಕಚೇರಿಯಲ್ಲಿ ಕಂಪನಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮತ್ತು ಅಧಿಕಾರಿಗಳ ಜೊತೆ ಸ್ಮಾರ್ಟ್‌ಸಿಟಿ ಯೋಜನೆಗಳು ಮತ್ತು ಅವುಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಡನೆ ಮಾತನಾಡುತ್ತಿದ್ದರು.

ಕರೆಯಬೇಕಾದ ಟೆಂಡರ್‌ಗಳು

ತುಮಕೂರಿನ ಬಿ.ಎಚ್.ರಸ್ತೆಯ ಸರ್ಕಾರಿ ಪಿ.ಯು. ಕಾಲೇಜಿನಲ್ಲಿ ಸ್ಮಾರ್ಟ್ ಕೊಠಡಿ ಗಳನ್ನು ಅಭಿವೃದ್ಧಿ ಪಡಿಸಲು 33 ಲಕ್ಷ 88 ಸಾವಿರ ರೂ. ವೆಚ್ಚದ ನಿರೀಕ್ಷೆಯಲ್ಲಿ ಮತ್ತು ತುಮಕೂರು ಅಮಾನಿಕೆರೆಯ ಸ್ಮಾರ್ಟ್ ಲಾಂಜ್‌ಗಳನ್ನು ನಿರ್ವಹಣೆ ಮಾಡಲು 95 ಲಕ್ಷ 60 ಸಾವಿರ ರೂ. ವೆಚ್ಚದ ನಿರೀಕ್ಷೆಯಲ್ಲಿ ಏಜೆನ್ಸಿಗಳನ್ನು ಆಹ್ವಾನಿಸಲು ಡಿ. 8 ರೊಳಗೆ ಟೆಂಡರ್ ಕರೆಯಬೇಕಾಗಿದೆ.

– ಎಸ್.ಪಿ. ಮುದ್ದಹನುಮೇಗೌಡ, ಸಂಸದ.

2016 ರ ಅಕ್ಟೋಬರ್ 3 ರಂದು ಸ್ಮಾರ್ಟ್‌ಸಿಟಿ ಪ್ರಕ್ರಿಯೆಯ ಎರಡನೇ ಸುತ್ತಿನಲ್ಲಿ ತುಮಕೂರು ನಗರ ಆಯ್ಕೆಯಾಗಿದೆ. 2017 ರ ಫೆಬ್ರವರಿ 6 ರಂದು ಎಸ್.ವಿ.ಪಿ. ಸಂಯೋಜನೆಗೊಂಡಿದೆ. 2017 ರ ಮಾರ್ಚ್ 2 ರಂದು ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ನೇಮಕಾತಿ ಆಗಿದೆ. 2017 ರ ಏಪ್ರಿಲ್‌ನಲ್ಲಿ ಪಿ.ಎಂ.ಸಿ.ಯನ್ನು ಅಂತಿಮಗೊಳಿಸಲಾಗಿದೆ. ಕಂಪನಿಯ ಕಾರ್ಯೋದ್ದೇಶಗಳು ಮುಂದಿನ 5 ವರ್ಷಗಳಲ್ಲಿ ಅನುಷ್ಠಾನಕ್ಕೆ ಬರಬೇಕು. ಈವರೆಗೆ ತುಮಕೂರು ಸ್ಮಾರ್ಟ್‌ಸಿಟಿ ಕಂಪನಿಯಿಂದ ಆಗಿರುವ ಪ್ರಗತಿಯನ್ನು ಇಂದು ಪರಿಶೀಲಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುವ ಕೆಲವು ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ಇದಾದ ನಂತರ ಮತ್ತೆ ಆಗಬೇಕಾದ ಕಾರ್ಯಗಳ ಬಗ್ಗೆ ಆಲೋಚಿಸಲು 2018 ರ ಜನವರಿ ತಿಂಗಳಿನಲ್ಲಿ ಮತ್ತೊಮ್ಮೆ ಪ್ರಗತಿ ಪರಿಶೀಲನೆ ಸಭೆ ನಡೆಸಲಾಗುವುದು ಎಂದು ಅವರು ಹೇಳಿದರು.

ಯೋಜನೆಗಳ ಶೀಘ್ರ ಮಂಜೂರಾತಿಗೆ ಪ್ರಯತ್ನ: ಸ್ಮಾರ್ಟ್ ಸಿಟಿ ಕಂಪನಿಯು ನಗರದ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿದೆ. 179 ಕೋಟಿ ರೂ. ಮೀರಿದ ಕೆಲವು ಯೋಜನೆಗಳು ನಗರಾಭಿವೃದ್ಧಿ ಇಲಾಖೆಯ ಮಂಜೂರಾತಿಗಾಗಿ ಕಾಯುತ್ತಿವೆ. ಈ ಹಿನ್ನೆಲೆಯಲ್ಲಿ ತಾವು ಸದ್ಯದಲ್ಲೇ ತುಮಕೂರು ನಗರದ ಶಾಸಕರು ಮತ್ತು ಕಂಪನಿಯ ಸಿ.ಇ.ಓ. ಜೊತೆಯಲ್ಲಿ ಬೆಂಗಳೂರಿಗೆ ತೆರಳಿ ಇಲಾಖಾ ಸಚಿವರು, ಹಿರಿಯ ಅಧಿಕಾರಿಗಳೊಡನೆ ಚರ್ಚೆ ನಡೆಸು ವುದಾಗಿಯೂ, ಉದ್ದೇಶಿತ ಯೋಜನೆಗಳು ಶೀಘ್ರವಾಗಿ ಮಂಜೂರಾಗುವಂತೆ ಒತ್ತಡ ಹಾಕುವುದಾಗಿಯೂ ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

3.97 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಟೆಂಡರ್ ಮುಗಿದು ಕಾರ್ಯಾದೇಶ ನೀಡಲಾಗಿದೆ. 2.05 ಕೋಟಿ ರೂ. ಮೊತ್ತದ ಟೆಂಡರ್‌ಗಳು ಪರಿಶೀಲನೆಯಲ್ಲಿವೆ. 17.51 ಕೋಟಿ ರೂ. ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಡಿ.8 ರೊಳಗೆ 1.29 ಕೋಟಿ ರೂ. ಮೊತ್ತದ ಕಾಮಗಾರಿಗೆ ಟೆಂಡರ್ ಕರೆಯಲಾಗುತ್ತಿದೆ. ಒಟ್ಟು 179.59 ಕೋಟಿ ರೂ.ಗಳ ಯೋಜನೆಗಳ ಪ್ರಸ್ತಾವನೆಯನ್ನು ತಾಂತ್ರಿಕ ಅನುಮೋದನೆಗಾಗಿ ಕೆ.ಯು.ಐ.ಡಿ.ಎಫ್.ಸಿ.ಗೆ ಸಲ್ಲಿಸಿದ್ದು, ಬಳಿಕ ಟೆಂಡರ್ ಪ್ರಕ್ರಿಯೆ ನಡೆಸಬೇಕಿದೆ. ಸುಮಾರು 202 ಕೋಟಿ ರೂ.ಗಳ ಯೋಜನೆಗಳಿಗೆ ವಿವಿಧ ಇಲಾಖೆಗಳಿಂದ ಸ್ಪಷ್ಟೀಕರಣಗಳನ್ನು ಕೋರಲಾಗಿದೆ. 881.59 ಕೋಟಿ ರೂ. ಮೊತ್ತದ ಯೋಜನೆಗಳು ಪರಿಕಲ್ಪನೆಯ ಹಂತದಲ್ಲಿವೆ ಎಂದು ಅವರು ಈವರೆಗಿನ ಪ್ರಗತಿಯ ಅಂಕಿಅಂಶಗಳನ್ನು ಮುಂದಿಟ್ಟರು.

ಕಾರ್ಯಾದೇಶ ನೀಡಿರುವ ಕಾಮಗಾರಿಗಳು: ನಗರದ ಬಿ.ಎಚ್.ರಸ್ತೆಯ ಸಿದ್ದಗಂಗಾ ಕಾಲೇಜು ಬಸ್ ಷೆಲ್ಟರ್ ಬಳಿ 17 ಲಕ್ಷ ರೂ. ವೆಚ್ಚದಲ್ಲಿ ಇ-ಟಾಯ್ಲೆಟ್ ನಿರ್ಮಾಣ; ತುಮಕೂರು ಅಮಾನಿಕೆರೆಯಲ್ಲಿ 28 ಲಕ್ಷ 80 ಸಾವಿರ ರೂ. ವೆಚ್ಚದಲ್ಲಿ ಬಹುಮುಖ ಸೌಲಭ್ಯದ ‘‘ಸ್ಮಾರ್ಟ್ ಲಾಂಜ್’’ ನಿರ್ಮಾಣ; ತುಮಕೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸುಮಾರು 61 ಲಕ್ಷ 74 ಸಾವಿರ ರೂ. ವೆಚ್ಚದಲ್ಲಿ ‘‘ಸ್ಮಾಟ್ ಉದ್ಯಾನವನ’’ ನಿರ್ಮಾಣ; ಅಮಾನಿಕೆರೆಯ ರಾಜಗಾಲುವೆಗಳನ್ನು (ಫೀಡರ್ ಚಾನೆಲ್) 35 ಲಕ್ಷ ರೂ. ವೆಚ್ಚದಲ್ಲಿ ಸುಸಜ್ಜಿತಗೊಳಿಸುವ ಕಾಮಗಾರಿ; ಅಮಾನಿಕೆರೆಯಲ್ಲಿ 14 ಲಕ್ಷ 65 ಸಾವಿರ ರೂ. ವೆಚ್ಚದಲ್ಲಿ ಅರಣ್ಯ ಇಲಾಖೆ ಮೂಲಕ ನರ್ಸರಿ ಮತ್ತು ಅರಣ್ಯೀಕರಣ ಅಭಿವೃದ್ಧಿ; ತುಮಕೂರಿನ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ 2 ಕೋಟಿ 40 ಲಕ್ಷ ರೂ. ವೆಚ್ಚದಲ್ಲಿ ಪಾತ್ ವೇ ಮತ್ತು ಜಾಗಿಂಗ್ ಟ್ರಾಕ್ ನಿರ್ಮಾಣ - ಒಟ್ಟು 3,97,19,000 ರೂ.ಗಳ ಈ 6 ಕಾಮಗಾರಿಗಳಿಗೆ ಟೆಂಡರ್ ಮುಕ್ತಾಯವಾಗಿದೆ. ಇ-ಟಾಯ್ಲೆಟ್, ಸ್ಮಾರ್ಟ್ ಲಾಂಜ್, ಸ್ಮಾರ್ಟ್ ಪಾರ್ಕ್ ಇವುಗಳಿಗೆ ಈಗಾಗಲೇ ಕಾರ್ಯಾದೇಶ

5ನೇ ಪುಟಕ್ಕೆ

ರಾಜಕಾರಣಿಗಳು, ಅಧಿಕಾರಿಗಳು ಶ್ರಮಿಸಿದರೆ ರಾಜ್ಯದ ಪ್ರಗತಿ

ತುರುವೇಕೆರೆ

ರಾಜಕಾರಣಿಗಳು, ಅಧಿಕಾರಿಗಳು ಶ್ರಮಿಸಿದರೆ ರಾಜ್ಯದ ಸರ್ವತೋಮುಖ ಪ್ರಗತಿ ಸಾಧ್ಯವೆಂದು ಹಿಂದುಳಿದ ವರ್ಗದ ರಾಜ್ಯಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯ ಎಂ.ಡಿ.ಲಕ್ಷ್ಮೀನಾರಾಯಣ್ ತಿಳಿಸಿದರು.

ತಾಲ್ಲೂಕಿನ ಮುನಿಯೂರಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಹಮ್ಮಿಕೊಂಡಿದ್ದ ನೂತನ ವಾಣಿಜ್ಯ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿದರೆ ತಮ್ಮ ಕರ್ತವ್ಯ ಮುಗಿಯಿತು ಎಂದು ಮತದಾರರು ಸುಮ್ಮನಾಗಬಾರದು, ಜನರು ರಾಜಕಾರಣಿಗಳನ್ನು ಹಿಡಿದು ತಮ್ಮ ಗ್ರಾಮದ ಅಭಿವೃದ್ಧಿಗೆ ಕೆಲಸ ತೆಗೆದುಕೊಳ್ಳಬೇಕು. ಆಗ ಮಾತ್ರ ಹಳ್ಳಿಗಳು ಮೂಲಭೂತ ಸೌಕರ್ಯಗಳನ್ನು ಪಡೆದುಕೊಳ್ಳಲು ಸಾಧ್ಯ. ಮುನಿಯೂರಿನ ವಿವೇಕಾನಂದ ನಗರಕ್ಕೆ 40 ಲಕ್ಷ ರೂ.ಗಳ ಡಾಂಬರೀಕೃತ ರಸ್ತೆಯನ್ನು ಮಾಡಲಾಗಿದ್ದು, ಮತ್ತೆ 1 ಕೋಟಿ ವೆಚ್ಚದಲ್ಲಿ ನವಗ್ರಾಮ ಯೋಜನೆಯನ್ನು ತರಲಾಗಿದೆ ಎಂದರು. ಜಿಲ್ಲಾ ಡಿಸಿಸಿ ಬ್ಯಾಂಕ್‌ನ ನಿರ್ದೇಶಕ ದೇವರಾಜ್ ಮಾತನಾಡಿ ಕೃಷಿ ಸಹಕಾರಿ ಬ್ಯಾಂಕ್‌ಗಳ ಮೂಲಕ ರೈತಾಪಿ ವರ್ಗಕ್ಕೆ ಶೂನ್ಯ ಬಡ್ಡಿಯಲ್ಲಿ ಸಾಲ ದೊರಕಿಸುವುದರೊಂದಿಗೆ ಜಿಲ್ಲಾ ಡಿಸಿಸಿ ಬ್ಯಾಂಕ್ ರೈತರ ಬ್ಯಾಂಕ್ ಎನಿಸಿದೆ ಎಂದರು.

ಕೃಷಿ ಸಹಕಾರಿ ಬ್ಯಾಂಕ್‌ಗಳ ಮೂಲಕ ರೈತಾಪಿ ವರ್ಗಕ್ಕೆ ಶೂನ್ಯ ಬಡ್ಡಿಯಲ್ಲಿ ಸಾಲ ದೊರಕಿಸುವುದರೊಂದಿಗೆ ಜಿಲ್ಲಾ ಡಿಸಿಸಿ ಬ್ಯಾಂಕ್ ರೈತರ ಬ್ಯಾಂಕ್ ಎನಿಸಿದೆ. ಇದರೊಂದಿಗೆ ಜಿಲ್ಲಾ ಡಿಸಿಸಿ ಬ್ಯಾಂಕ್‌ನ ಅಧ್ಯಕ್ಷ ರಾಜಣ್ಣನವರು ಹತ್ತು ಹಲವು ಸದುಪಯೋಗಿ ಯೋಜನೆಗಳನ್ನ ಅನುಷ್ಠಾನಗೊಳಿಸಿದ್ದಾರೆ. ಮೃತರೈತ ಕುಟುಂಬಗಳಿಗೆ 1 ಲಕ್ಷ ರೂ.ಗಳ ಸಾಲ ಮನ್ನಾಯೋಜನೆ ರೂಪಿಸಿದ್ದು ನಮ್ಮ ಜಿಲ್ಲಾ ಡಿಸಿಸಿ ಬ್ಯಾಂಕ್ ರಾಜ್ಯದಲ್ಲಿ ನಿರಂತರ ಎ ಶ್ರೇಣಿ ಮಾನ್ಯತೆ ಪಡೆದಿದೆ.

-ದೇವರಾಜ್

ವಿಎಸ್‌ಎಸ್‌ಎನ್‌ನ ಅಧ್ಯಕ್ಷರಾದ ಟಿ.ಸಿ.ರಾಜುರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಕೃಷಿ ಬ್ಯಾಂಕ್‌ನ ಸರ್ವತೋಮುಖ ಪ್ರಗತಿಗೆ ಸಹಕಾರ ನೀಡಿದ ಎಲ್ಲರನ್ನೂ ಸ್ಮರಿಸಿದರು.

ಈ ಸಮಾರಂಭದಲ್ಲಿ ಜಿಲ್ಲಾ ಡಿಸಿಸಿ ಬ್ಯಾಂಕ್‌ನ ನರಸಿಂಹಮೂರ್ತಿ, ಜಿ.ಆರ್.ವಿಜಯ್‌ಕುಮಾರ್, ಲಕ್ಷ್ಮೀನಾರಾಯಣ್, ಟಿ.ಆರ್.ನಾಗರಾಜು, ಕಾವಲ್ಲಿಗೌಡ್ರು, ಮುಖಂಡರಾದ ಜಿ.ಎಸ್.ಕೃಷ್ಣಮೂರ್ತಿ, ಬುಗುಡನಹಳ್ಳಿ ಕೃಷ್ಣಮೂರ್ತಿ, ಗ್ರಾಪಂ ಅಧ್ಯಕ್ಷ ಲಿಂಗರಾಜು, ವಿಎಸ್‌ಎನ್ ನಿರ್ದೇಶಕರು, ಗ್ರಾಮ ಮುಖಂಡರು ಇದ್ದರು.

ಅಣ್ಣಾ ಹಜಾರೆ ಮತ್ತೆ ಚಳವಳಿ

ನವದೆಹಲಿ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಭ್ರಷ್ಟಾಚಾರ ವಿರೋಧಿ ಜನಲೋಕಪಾಲ್ ಮಸೂದೆಯನ್ನು ದುರ್ಬಲಗೊಳಿಸಿದೆ ಎಂದು ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಆರೋಪಿಸಿದ್ದಾರೆ. ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ಕೈಗಾರಿಕೋದ್ಯಮಿಗಳ ಪರವಾಗಿವೆ. ರೈತರ ಸಮಸ್ಯೆಗಳ ಬಗ್ಗೆ ಸ್ಪಂದಿಸುತ್ತಿಲ್ಲ. ಹೀಗಾಗಿ ಮಾರ್ಚ್ 23 ರಿಂದ ಮತ್ತೆ ಚಳವಳಿ ಆರಂಭಿಸುವುದಾಗಿ ಅವರು ತಿಳಿಸಿದ್ದಾರೆ.

ಅಯೋಧ್ಯೆ ವಿವಾದ ವಿಚಾರಣೆ ಮುಂದೂಡಿಕೆ

ನವದೆಹಲಿ

ದೀರ್ಘಾವಧಿಯಿಂದ ನಡೆದುಕೊಂಡು ಬಂದಿರುವ ರಾಮ ಜನ್ಮಭೂಮಿ ಹಾಗೂ ಬಾಬರಿ ಮಸೀದಿ ವಿವಾದದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಮುಂದಿನ ವಿಚಾರಣೆಯನ್ನು 2018ರ ಫೆಬ್ರವರಿ 8ಕ್ಕೆ ಮುಂದೂಡಿದೆ. ಅಲಹಾಬಾದ್ ಹೈಕೋರ್ಟ್ 2010 ರಲ್ಲಿ ನೀಡಿದ್ದ ತೀರ್ಪು ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ದೀಪಕ್ ಮಿಶ್ರಾ, ಅಶೋಕ್ ಭೂಷಣ್, ಅಬ್ದುಲ್ ನಜೀರ್ ಅವರನ್ನೊಳಗೊಂಡ ಪೀಠ ವಿಚಾರಣೆಯನ್ನು ಮುಂದೂಡಿತು.

ಶಶಿಕಪೂರ್ ಅಂತ್ಯಕ್ರಿಯೆ

ಮುಂಬೈ

80ರ ದಶಕದಲ್ಲಿ ಬಾಲಿವುಡ್‌ನ ರೊಮ್ಯಾಂಟಿಕ್ ಹೀರೋಗಳಲ್ಲಿ ಒಬ್ಬರಾಗಿದ್ದ ಬಾಲಿವುಡ್ ನಟ ಶಶಿಕಪೂರ್ ಅವರ ಅಂತ್ಯಕ್ರಿಯೆಯನ್ನು ಸ್ಯಾಂಟಾಕ್ರೂಸ್ ಹಿಂದೂ ರುದ್ರಭೂಮಿಯಲ್ಲಿ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಯಿತು.

ಭ್ರಷ್ಟಾಚಾರ: ಅನುದಾನ ನಿಲ್ಲಿಸಿದ ಚೀನಾ

ಬೀಜಿಂಗ್

ಕಾಶ್ಮೀರದ ಮೇಲೆ ಹಾದು ಹೋಗುವ 50 ಬಿಲಿಯನ್ ಡಾಲರ್ ಮೊತ್ತದ ಚೀನಾ-ಪಾಕಿಸ್ತಾನ ಎಕನಾಮಿಕ್ ಕಾರಿಡಾರ್ ಯೋಜನೆಯಲ್ಲಿ ಭ್ರಷ್ಟಾಚಾರದ ಆರೋಪ ಕೇಳಿಬಂದಿದ್ದರಿಂದ ಚೀನಾ ಯೋಜನೆಯ ಅನುದಾನವನ್ನು ತಾತ್ಕಾಲಿಕವಾಗಿ ನಿಲ್ಲಿಸಿದೆ.

ನ್ಯಾಯಾಧೀಶರುಗಳ ಮನೆಯಲ್ಲಿ ಕಳ್ಳತನ

ತುಮಕೂರು

ತುಮಕೂರಿನ ಇಬ್ಬರು ನ್ಯಾಯಾಧೀಶರ ಮನೆಗಳಲ್ಲಿ ಕಳ್ಳತನ ಹಾಗೂ ಕಳವು ಯತ್ನ ಪ್ರಕರಣಗಳು ಸೋಮವಾರ ರಾತ್ರಿ ನಡೆದಿದೆ.

ಇಲ್ಲಿನ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಕಟ್ಟಿಮನಿ ಅವರ ನಿವಾಸಕ್ಕೆ ರಾತ್ರಿ ಸುಮಾರು 1 ಗಂಟೆ ಸಮಯದಲ್ಲಿ ಬಾಗಿಲು ಮೀಟಿ ಒಳ ನುಗ್ಗಲು ಯತ್ನಿಸಿದಾಗ ಎಚ್ಚೆತ್ತ ನ್ಯಾಯಾಧೀಶರ ಕುಟುಂಬದವರು ಗಲಾಟೆ ಮಾಡಿದಾಗ ಅಲ್ಲಿಂದ ಕಳ್ಳರು ಪರಾರಿಯಾದರೆಂದು ತಿಳಿದು ಬಂದಿದೆ. ಈ ಸಂಬಂಧ ತುಮಕೂರು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಲ್ಲಿನ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ನವೀನ್ ಕುಮಾರಿ ಅವರ ಮನೆಗೆ ನುಗ್ಗಿರುವ ಕಳ್ಳರು ಮನೆಯಲ್ಲಿ ಒಡವೆ ವಸ್ತುಗಳನ್ನು ಕಳವು ಮಾಡಿರುವುದಾಗಿ ತಿಳಿದು ಬಂದಿದೆ.

ನ್ಯಾಯಾಧೀಶರು ಊರಿನಲ್ಲಿ ಇರಲಿಲ್ಲ. ಅನ್ಯ ಕಾರ್ಯನಿಮಿತ್ತ ನ್ಯಾಯಾಲಯಕ್ಕೆ ರಜೆ ಹಾಕಿ ತಮ್ಮ ಊರಿಗೆ ತೆರಳಿದ್ದಾಗ ಸೋಮವಾರ ರಾತ್ರಿ ಈ ಘಟನೆ ನಡೆದಿದೆ. ನ್ಯಾಯಾಧೀಶರು ಇಲ್ಲಿಗೆ ಆಗಮಿಸಿ ಪರಿಶೀಲಿಸಿದಾಗ ಮನೆಯಲ್ಲಿ ಏನೇನು ವಸ್ತುಗಳು ಹಾಗೂ ಒಡವೆಗಳು ಕಳುವಾಗಿರಬಹುದು ಎಂಬ ಮಾಹಿತಿ ಲಭ್ಯವಾಗುತ್ತದೆ.

ಈ ಸಂಬಂಧ ತುಮಕೂರು ನಗರ ಠಾಣೆ ಸಬ್‌ಇನ್ಸ್‌ಪೆಕ್ಟರ್ ವಿಜಯಕುಮಾರ್, ಪೊಲೀಸ್ ವರಿಷ್ಠಾಧಿಕಾರಿಗಳು ಶಿರಾಗೇಟ್ ಬಳಿ ಇರುವ ಎರಡೂ ಮನೆಗಳಿಗೆ ತೆರಳಿ ಪರಿಶೀಲಿಸಿದರು. ಈ ಬಗ್ಗೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆಯರು ಸಂಘಟನೆಯ ಮೂಲಕ ಸದೃಢರಾಗಿ

ತುಮಕೂರು

ರಾಜ್ಯದಲ್ಲಿ ಭ್ರಷ್ಟಾಚಾರ, ಅತ್ಯಾಚಾರಗಳು ಹೆಚ್ಚಾಗಿವೆ. ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲು ವಿಫಲವಾಗುತ್ತಿದ್ದು, ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಬೇಕಿದೆ ಎಂದು ರಾಜ್ಯ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ ಭಾರತಿ ಶೆಟ್ಟಿ ತಿಳಿಸಿದರು.

ನಗರದ ಬಾವಿಕಟ್ಟೆ ಕಲ್ಯಾಣ ಮಂಟಪದಲ್ಲಿ ಭಾರತೀಯ ಜನತಾ ಪಕ್ಷದಿಂದ ಮಹಿಳಾ ಸಮಾವೇಶ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಸಮಾಜದಲ್ಲಿ ಶೇ.50 ರಷ್ಟು ಮಹಿಳೆಯರಿದ್ದಾರೆ. ರಾಜ್ಯದಲ್ಲಿ ಸುಮಾರು 7520 ಮಹಿಳೆಯರ ಕೊಲೆ, 3937 ಅತ್ಯಾಚಾರ, 24751 ಹಿಂಸಾಚಾರ ಪ್ರಕರಣಗಳು ಕಂಡು ಬಂದಿದ್ದು, ಬೆಳಗಾವಿ ಅಧಿವೇಶನದಲ್ಲಿ ಹೊರಡಿಸಿದ ಮೂಲಗಳು ತಿಳಿಸಿವೆ. ಇವನ್ನು ತಡೆಗಟ್ಟಲು ರಾಜ್ಯ ಸರ್ಕಾರ ವಿಫಲವಾಗುತ್ತಿದ್ದು ಸೂಕ್ತಕ್ರಮ ಕೈಗೊಳ್ಳಬೇಕಾಗಿದೆ ಎಂದು ಅವರು ತಿಳಿಸಿದರು.

ಮಹಿಳೆಯರು ಎಚ್ಚೆತ್ತುಕೊಂಡು, ಉತ್ತಮವಾದ ಸಂಘಟನೆಗಳನ್ನು ಕಟ್ಟಿ ಹೋರಾಟ ಮಾಡಿ. ಈ ಮೂಲಕ ಸ್ವಾರ್ಥ ಮನೋಭಾವವನ್ನು ಬಿಟ್ಟು ನಿಸ್ವಾರ್ಥಿಗಳಾಗಿ ದೇಶದ ಅಭಿವೃದ್ಧಿಗಾಗಿ ಶ್ರಮವಹಿಸಿ. ಇಂದಿನ ಸಮಾಜದಲ್ಲಿ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲೂ ಮೇಲುಗೈ ಪಡೆದು ಹೆಚ್ಚು ಸದೃಢರಾಗಬೇಕಾಗಿದೆ.

- ಭಾರತಿ ಶೆಟ್ಟಿ ರಾಜ್ಯ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷೆ

ಭಾರತೀಯ ಜನತಾ ಪಕ್ಷ
ಮಹಿಳಾ ಸಮಾವೇಶ
BJP - TUMKUR
ಬಿಜೆಪಿ - ತುಮಕೂರು

ಕೇಂದ್ರ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದರೂ, ರಾಜ್ಯ ಸರ್ಕಾರ ಅವುಗಳನ್ನು ನೆರವೇರಿಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಮಹಿಳೆಯರು ಎಚ್ಚೆತ್ತುಕೊಂಡು, ಉತ್ತಮವಾದ ಸಂಘಟನೆಗಳನ್ನು ಕಟ್ಟಿ ಹೋರಾಟ ಮಾಡಬೇಕಾಗಿದೆ. ಈ ಮೂಲಕ ಸ್ವಾರ್ಥ ಮನೋಭಾವವನ್ನು ಬಿಟ್ಟು ನಿಸ್ವಾರ್ಥಿಗಳಾಗಿ ದೇಶದ ಅಭಿವೃದ್ಧಿಗಾಗಿ ಶ್ರಮವಹಿಸಬೇಕಿದೆ. ಇಂದಿನ ಸಮಾಜದಲ್ಲಿ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲೂ ಮೇಲುಗೈ ಪಡೆದು ಹೆಚ್ಚು ಸದೃಢರಾಗಬೇಕಾಗಿದೆ ಎಂದರು.

ಪ್ರತಿಯೊಬ್ಬರೂ ಜೀವನದಲ್ಲಿ ಗುರಿ, ದೃಢವಾದ ಮನಸ್ಸು, ಮಾನವೀಯತೆ ರೂಢಿಸಿಕೊಳ್ಳಬೇಕಾಗಿದೆ. ನನ್ನಿಂದ ಸಮಾಜಕ್ಕೆ ಒಳ್ಳೆಯದಾಗಲಿ ಎನ್ನುವ ಮನೋಭಾವನೆಯನ್ನಿಟ್ಟುಕೊಂಡು ಕಾರ್ಯ ನಿರ್ವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರು ಸದೃಢರಾಗಿ ಮುಂಬರುವ ಚುನಾವಣೆಯಲ್ಲಿ ಜಿಲ್ಲೆಯ 11 ತಾಲ್ಲೂಕುಗಳಲ್ಲಿ ಪಕ್ಷವನ್ನು ಬಲಿಷ್ಠಗೊಳ್ಳಲು ಕಾರ್ಯನಿರ್ವಹಿಸಿ ಅಧಿಕಾರ ಪಡೆಯುವಂತಾಗಬೇಕು ಎಂದು ತಿಳಿಸಿದರು.

7ನೇ ಪುಟಕ್ಕೆ

‘ಡೀಲಿಂಗ್’ ಅನುಕೂಲಕ್ಕೆ ಕಂದಾಯ ಶಾಖೆ ‘ಶಿಫ್ಟ್’, ಪಾಲಿಕೆಯಲ್ಲಿ ‘8 ಜನರ ಬೆದರಿಕೆ ತಂಡ’:ಆರೋಪ

ತುಮಕೂರು

ತುಮಕೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ಕಂದಾಯ ಶಾಖೆಯನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತರ ಮಾಡಿರುವ ಜೆ.ಡಿ.ಎಸ್. ಆಡಳಿತದ ಕ್ರಮವು ತೀವ್ರ ವಿವಾದಕ್ಕೆಡೆಮಾಡಿದ್ದು, ಪಾಲಿಕೆಯ ಒಳಗೆ ಮತ್ತು ಹೊರಗೆ ಭಾರಿ ಚರ್ಚೆಗೆ ಕಾರಣವಾಗಿದೆ.

ಮಹಾನಗರ ಪಾಲಿಕೆ ಆವರಣದಲ್ಲಿರುವ ಹಳೆಯ ಸರ್ವೋದಯ ಕಾಲೇಜಿನ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಂದಾಯ ಶಾಖೆಯನ್ನು ಇದೀಗ ಪಾಲಿಕೆಯ ಪ್ರಧಾನ ಕಚೇರಿಯ ಮೊದಲನೇ ಮಹಡಿಯಲ್ಲಿದ್ದ ಕಂಪ್ಯೂಟರ್ ಶಾಖೆಗೆ ಸ್ಥಳಾಂತರಿಸಲಾಗಿದೆ. ಕಂಪ್ಯೂಟರ್ ಶಾಖೆಯನ್ನು ಕಂದಾಯ ಶಾಖೆ ಇದ್ದ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗಿದೆ. ಪಾಲಿಕೆಯ ಜೆ.ಡಿ.ಎಸ್. ಆಡಳಿತವು ಕೈಗೊಂಡಿರುವ ಈ ತೀರ್ಮಾನವು ಪಾಲಿಕೆಯ ಅಧಿಕಾರಿಗಳ ವಲಯದಲ್ಲಿ ಅಸಮಾಧಾನದ ಹೊಗೆಯನ್ನು ಎಬ್ಬಿಸಿದೆ. ಕಂದಾಯ ಶಾಖೆಗಿಂತ ಕಂಪ್ಯೂಟರ್ ಶಾಖೆಯನ್ನು ಪ್ರಧಾನ ಕಚೇರಿಯಿಂದ ಎತ್ತಂಗಡಿ ಮಾಡಿರುವುದು ದೈನಂದಿನ ಕಚೇರಿ ಆಡಳಿತಕ್ಕೆ ಅಡಚಣೆ ಮೂಡಿಸುತ್ತಿದೆ ಎಂಬುದೇ ಅಧಿಕಾರಿ ವಲಯದ ಅಸಮಾಧಾನಕ್ಕೆ ಮುಖ್ಯ ಕಾರಣ ಎಂದು ಮೂಲಗಳು ಹೇಳುತ್ತಿವೆ.

‘‘ಕಂದಾಯ ಶಾಖೆಯ ಕಾರ್ಯನಿರ್ವಹಣೆಗೆ ಹಿಂದಿನ ಸರ್ವೋದಯ ಕಾಲೇಜು ಕಟ್ಟಡ ಪ್ರಶಸ್ತವಾಗಿತ್ತು. ಆ ಕಟ್ಟಡ ವಿಶಾಲವಾಗಿಯೂ ಇತ್ತು. ಹಿರಿಯ ನಾಗರಿಕರು, ವಿಕಲಚೇತನರು ಬಂದು ಹೋಗಲು ಅನುಕೂಲಕರವಾಗಿತ್ತು. ಆದರೆ ಅದನ್ನು ದಿಢೀರನೆ ಪಾಲಿಕೆಯ ಪ್ರಧಾನ ಕಚೇರಿಯ ಮೊದಲನೇ ಮಹಡಿಗೆ ಸ್ಥಳಾಂತರಿಸಲಾಗಿದೆ. ವಿಕಲಚೇತನರು ಮೊದಲ ಮಹಡಿಗೆ ಹೇಗೆ ಬರುತ್ತಾರೆ? ಹಿರಿಯ ನಾಗರಿಕರು ಮಹಡಿ ಹತ್ತುವುದು ತ್ರಾಸದಾಯಕವಲ್ಲವೇ? ತಮ್ಮ ಕೆಲಸ ಕಾರ್ಯಗಳಿಗಾಗಿ ನಾಲ್ಕಾರುಬಾರಿ ಕಂದಾಯ ಶಾಖೆಗೆ ಬರಬೇಕೆಂದರೆ ಇಂಥವರು ಅನುಭವಿಸುವ ತೊಂದರೆ ಎಷ್ಟು? ಎಂಬುದು ಈ ಜೆ.ಡಿ.ಎಸ್. ಆಡಳಿತಗಾರರಿಗೆ ತೋಚಲಿಲ್ಲವೇ?’’ ಎಂಬ ಪ್ರಶ್ನೆಗಳು ಪಾಲಿಕೆಯ ಒಳ-ಹೊರಗೆ ಹರಿದಾಡುತ್ತಿವೆ.

ಇಕ್ಕಟ್ಟಾದ ಹೊಸ ಜಾಗ: ‘‘ಪಾಲಿಕೆಯ ಮೊದಲನೇ ಮಹಡಿಯಲ್ಲಿ ಕಂಪ್ಯೂಟರ್ ಶಾಖೆ ಇದ್ದ ಕೊಠಡಿಗೆ ಕಂದಾಯ ಶಾಖೆಯನ್ನು ಸ್ಥಳಾಂತರಿಸಲಾಗಿದೆ. ಸ್ಥಳಾಂತರ ಪ್ರಕ್ರಿಯೆ ನಡೆಯುತ್ತಿದೆ. ಆದರೆ ಕಂದಾಯ ಶಾಖೆಗೆ ಈ ಕೊಠಡಿ ಇಕ್ಕಟ್ಟಾಗುತ್ತಿದೆ. ಅಧಿಕಾರಿ-ನೌಕರರು ಕುಳಿತು ಕಾರ್ಯನಿರ್ವಹಿಸಲು ಸ್ಥಳಾವಕಾಶ ಸಾಲದಾಗುತ್ತಿದೆ. ದಾಖಲಾತಿಗಳನ್ನು ಸೂಕ್ತವಾಗಿ ಜೋಡಿ ಸಿಡಲು ತೊಂದರೆ ಆಗುತ್ತಿದೆ. ಅಲ್ಲದೆ ಸಾರ್ವಜನಿಕರು ಬಂದಾಗಲೂ ಸ್ಥಳಾಭಾವ ಉಂಟಾಗುತ್ತದೆ. ಮೊದಲೇ ಚಿಕ್ಕದಾಗಿರುವ ಪ್ರಧಾನ ಕಚೇರಿಯಲ್ಲಿ ಕಂದಾಯ ಶಾಖೆಯ ಸೇರ್ಪಡೆಯಿಂದಾಗಿ

7ನೇ ಪುಟಕ್ಕೆ

‘‘ಪಾಲಿಕೆ ಕಚೇರಿಯಲ್ಲಿ ‘8 ಜನರ ಬೆದರಿಕೆ ತಂಡ’ ಅಗೋಚರವಾಗಿ ಕೆಲಸ ಮಾಡುತ್ತಿದೆ. ಅಧಿಕಾರಿ–ಸಿಬ್ಬಂದಿಯನ್ನು ಬೆದರಿಸಿಕೊಂಡು ತಮ್ಮ ಡೀಲಿಂಗ್‌ಗೆ ಅನುಕೂಲವಾಗುವಂತೆ ಕೆಲಸ ಮಾಡಿಸಿಕೊಳ್ಳುವುದೇ ಈ ತಂಡದ ದೈನಂದಿನ ಕಾಯಕವಾಗಿದೆ. ‘ಡೀಲಿಂಗ್ ಮಾಸ್ಟರ್’ ಇದರ ಮುಖಂಡರು. ಪಾಲಿಕೆಯಲ್ಲಿ ಈ ತಂಡ ಹೇಳಿದ್ದೇ ನಡೆಯಬೇಕು. ಅದರಲ್ಲೂ ಕಂದಾಯ ಶಾಖೆಯ ಮೇಲೆ ಈ ‘ಬೆದರಿಕೆ ತಂಡ’ದ ಹಿಡಿತ ಬಲವಾಗಿದೆ. ಕಂದಾಯ ಶಾಖೆಯ ಚಲನವಲನಗಳ ಮೇಲೆ ಈ ತಂಡ ಕಣ್ಣಿಟ್ಟಿದ್ದು ‘ಲಾಭ’ ಮಾಡಿಕೊಳ್ಳುತ್ತಿದೆ. ಇಲ್ಲಿ ಏನೇ ನಡೆದರೂ, ಈ ‘ತಂಡ’ಕ್ಕೆ ಸೂಕ್ತ ‘ಪಾಲು’ ಬಂದುಬಿಡಬೇಕಂತೆ. ಈ ತಂಡದ ವಿರುದ್ಧ ದನಿಯೆತ್ತಲು ಎಲ್ಲರೂ ಹೆದರುತ್ತಿದ್ದಾರಂತೆ. ಕಂದಾಯ ಶಾಖೆ ಇಲ್ಲಿಗೆ ಸ್ಥಳಾಂತರ ಆಗಲು ಸಹ ಈ ತಂಡದ ಕೈವಾಡ ಇದೆಯಂತೆ. ಬೆದರಿಸುವುದು, ಡೀಲಿಂಗ್ ಮಾಡುವುದು, ಬಂದದ್ದನ್ನು ಹಂಚಿಕೊಳ್ಳುವುದು ಈ ತಂಡದ ದೈನಂದಿನ ಕಾಯಕ ಆಗಿದೆಯಂತೆ’’ ಎಂಬ ಗಂಭೀರ ಸ್ವರೂಪದ ಆರೋಪಗಳು ಹೋರಾಟಗಾರರ ವಲಯದಲ್ಲಿ ಕೇಳಿಬರುತ್ತಿವೆ.

ತ್ಯಾಗ-ಶ್ರಮ ಸಾರ್ಥಕವಾಗಬೇಕು

ತುಮಕೂರು

ಮರಾಠ ಹಾಸ್ಟೆಲ್ ಸ್ಥಾಪನೆಯ ಹಿಂದಿನ ಶ್ರಮ, ತ್ಯಾಗ, ಸಾಧನೆ, ಭವಿಷ್ಯದ ಮುನ್ನೋಟ ಇವೆಲ್ಲವುಗಳನ್ನು ನಾವುಗಳು ಮನಗಾಣಬೇಕಿದೆ. ವಿಶೇಷವಾಗಿ ವಿದ್ಯಾರ್ಥಿಗಳು ಇದನ್ನು ಅರ್ಥ ಮಾಡಿಕೊಂಡು ಸಾರ್ಥಕಪಡಿಸಿಕೊಳ್ಳಬೇಕೆಂದು ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎ.ಮುಚ್ಚಂಡಿ ತಿಳಿಸಿದರು.

ಅವರು ಇತ್ತೀಚೆಗೆ ನಗರದ ಬಿ.ಎಚ್.ರಸ್ತೆಯಲ್ಲಿನ ಆರ್.ವೆಂಕಟರಾವ್ ಮರಾಠ ಹಾಸ್ಟೆಲ್‌ನ ಸಂಸ್ಥಾಪಕರ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ., ಎರಡು ಕೈ ಸೇರಿದರೆ ಮಾತ್ರ ಚಪ್ಪಾಳೆ. ಹಾಗಾಗಿ ಹಾಸ್ಟೆಲ್ ಅಭಿವೃದ್ಧಿಗಾಗಿ ಎಲ್ಲರೂ ಸಹಕರಿಸೋಣ. ನಿಮ್ಮೊಂದಿಗೆ ನಾನಿದ್ದೇನೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿದ್ದ ನಗರದ ವಕೀಲರಾದ ಪ್ರೊ.ಎಚ್.ಎಸ್. ಶೇಷಾದ್ರಿ ತಮ್ಮ ಹಾಗೂ ಹಾಸ್ಟೆಲ್ ಸಂಸ್ಥಾಪಕ ವೆಂಕಟ್‌ರಾವ್ ಅವರ ಅರ್ಧ ಶತಮಾನಕ್ಕೂ ಹಿಂದಿನ ಒಡನಾಟವನ್ನು ಸ್ಮರಿಸಿ, ಹಾಸ್ಟೆಲ್‌ನಲ್ಲಿ ಭಿನ್ನಾಭಿಪ್ರಾಯ ತಲೆದೋರಿದಾಗ ಅವರು ಮತ್ತು ಮುಚ್ಚಂಡಿಯವರು ಸೇರಿ ರಾಜಿ ಮಾಡಿಸಿ ಸೌಹಾರ್ದಯುತವಾಗಿ ಸಮಸ್ಯೆ ಪರಿಹರಿಸಿ ಟ್ರಸ್ಟ್ ಸ್ಥಾಪನೆಗೆ ಕಾರಣವಾಗಿದ್ದನ್ನು ಸ್ಮರಿಸಿಕೊಂಡರು.

ಈ ಸಂದರ್ಭದಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಚಿನ್ನದ ಪದಕ ವಿಜೇತೆ ಅಥ್ಲೀಟ್ ಸಮಾಜದ ಸೌಮ್ಯ ಸಾವಂತ್ ಮತ್ತು 170ಕ್ಕೂ ಹೆಚ್ಚು ಚಲನಚಿತ್ರ ಹಾಗೂ 3000 ಕ್ಕೂ ಹೆಚ್ಚು ಟಿವಿ ಎಪಿಸೋಡ್‌ಗಳಲ್ಲಿ ನಟಿಸಿರುವ ಖ್ಯಾತ ಖಳನಟ ಸಮಾಜದ ಗಣೇಶ್‌ರಾವ್ ಕೇಸರ್ಕರ್ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ 50ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿ,ವಿದ್ಯಾರ್ಥಿನಿಯರಿಗೆ ನೆನಪಿನ ಕಾಣಿಕೆ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಯಿತು.

ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್‌ನ ರಾಣೋಜಿರಾವ್ ಸಾತೆ ಅವರು ಮಾತನಾಡಿ, 1954-55 ರಲ್ಲಿ ಇಲ್ಲಿ ನನಗೆ ವಿದ್ಯಾರ್ಥಿಯಾಗಿ ವಸತಿ ಸಿಕ್ಕಿರಲಿಲ್ಲ. ಈಗಿರುವ ವಿದ್ಯಾರ್ಥಿಗಳು ಅವಕಾಶವನ್ನು ಸದುಪಯೋಗಪಡಿಸಿಕೊಂಡು ಉತ್ತಮ ಸ್ಥಾನಕ್ಕೇರಿದಾಗ ಮರೆಯದೆ ಹಾಸ್ಟೆಲ್‌ಗೆ ಸಹಾಯ ಮಾಡಿ ಎಂದು ಕಿವಿಮಾತು ಹೇಳಿ, ಇಂದು 55 ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿದೆ. ಇದನ್ನು 200ಕ್ಕೆ ಏರಿಸುವ ಗುರಿ ಇದೆ ಎಂದರು.

ಹಾಸ್ಟೆಲ್‌ಗೆ ವಾಟರ್ ಫಿಲ್ಟರ್ ನೀಡಿರುವ ಹಳೆಯ ವಿದ್ಯಾರ್ಥಿ ಜಾಧವ್ ಮಾತನಾಡಿ ಗುರಿ ಇದ್ದರೆ ಮಾತ್ರ ಸಾಧನೆ ಸಾಧ್ಯ. ಸಕಾರಾತ್ಮಕ ಮನೋಭಾವದಿಂದ ಮುನ್ನುಗ್ಗಿ. ನಾನು ಇಲ್ಲಿ ಅನುಕೂಲ ಪಡೆದು ಇಂದು ಮುಂಬೈನ ಪ್ರತಿಷ್ಠಿತ ಕಂಪನಿಯಲ್ಲಿ ಉದ್ಯೋಗಿಯಾಗಿದ್ದೇನೆ ಎಂದರು.

5ನೇ ಪುಟಕ್ಕೆ

ಅಂಕು ಡೊಂಕು

ಚನ್ನೇನಹಳ್ಳಿ ಶಿವರಾಜ್

‘ಸೀರಿಯಲ್ ಹುಚ್ಚು’



ನೋಡು ಮಾವ ನನ್ನ ಹೆಂಡ್ತಿ ಕಣ್ಣಲ್ಲಿ ಒಂದು ಹನಿ ನೀರು ಹಾಕಿ ಸದಂತೆ ನೋಡಿಕೊಂಡಿದ್ದೆ, ಆದರೆ ಈ ಟಿ.ವಿ.ಸೀರಿಯಲ್‌ನಿಂದ ಕಣ್ಣೀರು ಹಾಕಿದ್ಲು ಅಷ್ಟೆ